# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **399** |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ ನಮೋಶಿ<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18-07-2024 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಒಟ್ಟು ಪತ್ರಕರ್ತರು ಎಷ್ಟು; ಈ ಪತ್ರಕರ್ತರಿಗೆ ಸಿಗುತ್ತಿರುವ ಸೌಲಭ್ಯಗಳೇನು; | ರಾಜ್ಯದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಒಟ್ಟು **2093** ಮಾನ್ಯತೆ ಪಡೆದ ಪತ್ರಿಕಾ ಮತ್ತು ಸುದ್ದಿ ವಾಹಿನಿಗಳ ಪತ್ರಕರ್ತರಿದ್ದು, ಇವರುಗಳಿಗೆ ಸಿಗುತ್ತಿರುವ ಸೌಲಭ್ಯಗಳು ಈ ಕೆಳಕಂಡಂತಿವೆ:-<br><br>1. ಮಾನ್ಯತಾ ಪತ್ರಗಳನ್ನು ಹೊಂದಿರುವ ಪತ್ರಕರ್ತರು ರಾಜ್ಯಾದ್ಯಂತ ಉಚಿತವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ವಿವಿಧ ನಿಗಮಗಳ ಎಲ್ಲಾ ಶ್ರೇಣಿಗಳ ಬಸ್ಸುಗಳಲ್ಲಿ ಸಂಚರಿಸಲು ಅನುಕೂಲ ವಾಗುವಂತೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ.<br>2. 2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-431ರಂತೆ ಗ್ರಾಮೀಣ ಪತ್ರಕರ್ತರ ವೃತ್ತಿ ಸಂಬಂಧಿತ ಕಾರ್ಯಚಟುವಟಿಕೆಗಳಿಗೆ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಯಾಣಿಸಲು ಉಚಿತ ಬಸ್‌ಪಾಸ್ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನು ಸಾರಿಗೆ ಇಲಾಖೆಯ ಸಹಯೋಗದೊಂದಿಗೆ ಜಾರಿಗೊಳಿಸಲು ಆರ್ಥಿಕ ಇಲಾಖೆಯ ಸಹಮತಿ ಮೇರೆಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.<br>3. ನಿಯಮಾನುಸಾರ ಅರ್ಹ ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರಿಗೆ ರೂ.12000/-ಗಳ ಮಾಸಾಶನ ಹಾಗೂ ಮೃತ ಫಲಾನುಭವಿಗಳ ಅವಲಂಬಿತರಿಗೆ ರೂ.6000/-ಗಳ ಕುಟುಂಬ ಮಾಸಾಶನ ನೀಡಲಾಗುತ್ತಿದೆ.<br>4. ರಾಜ್ಯದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಾನ್ಯತೆ ಪಡೆದ ಎಲ್ಲಾ ಪತ್ರಕರ್ತರು ಮತ್ತು ಅವರ ಕುಟುಂಬ ವರ್ಗದವರನ್ನು ಪ್ರಧಾನಮಂತ್ರಿ ಜನಾರೋಗ್ಯ ಯೋಜನೆಯ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಪರಿಶೀಲಿಸಲಾಗುತ್ತಿದೆ. |

| | | |
|---|---|---|
| (ಆ) | ರಾಜ್ಯದಲ್ಲಿರುವ ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿನ ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರಿಗೆ ಮಾಸಾಶನವನ್ನು ವಿತರಿಸುವ ಯೋಜನೆ ಜಾರಿಯಲ್ಲಿದ್ದು, ಚಾಲ್ತಿಯಲ್ಲಿರುವ ಮಾನದಂಡ ಮಾರ್ಗಸೂಚಿಗಳನ್ವಯ ಆಯ್ಕೆಯಾದ ಅರ್ಹ ಸಂಕಷ್ಟದಲ್ಲಿರುವ ಪತ್ರಕರ್ತರು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ ಹಾಗೂ ಫಲಾನುಭವಿಗಳು ಮೃತರಾದಲ್ಲಿ ಅವರ ಅವಲಂಬಿತರಿಗೆ ಕುಟುಂಬ ಮಾಸಾಶನವನ್ನು ನೀಡಲಾಗುತ್ತಿದೆ.<br>ನಿಯಮಾನುಸಾರ ಅರ್ಹ ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರಿಗೆ ರೂ.12000/-ಗಳ ಮಾಸಾಶನ ಹಾಗೂ ಮೃತ ಫಲಾನುಭವಿಗಳ ಅವಲಂಬಿತರಿಗೆ ರೂ.6000/-ಗಳ ಕುಟುಂಬ ಮಾಸಾಶನ ನೀಡಲಾಗುತ್ತಿದೆ. |
| (ಇ) | ಈ ಪತ್ರಕರ್ತರಿಗೆ ಕಳೆದ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಮಾಸಾಶನ ಮೊತ್ತವನ್ನು ರೂ.10,000/-ರಿಂದ 12,000/-ಗೆ ಹೆಚ್ಚಿಸಲಾಗುತ್ತಿದೆಯೆಂದು ಹಾಗೂ ಮಾಸಾಶನ ಪಡೆಯುವ ಪತ್ರಕರ್ತರು ಮೃತಪಟ್ಟಾಗ ಕುಟುಂಬದವರಿಗೆ ಮಾಸಾಶನವನ್ನು ರೂ.3,000/- ರಿಂದ 6,000/-ದವರೆಗೆ ಹೆಚ್ಚಿಸಲಾಗುವುದೆಂದು ತಿಳಿಸಲಾಗಿದೆಯೇ? ಈ ಪ್ರಕ್ರಿಯೆ ಯಾವ ಹಂತದಲ್ಲಿದೆ? | 2023-24ನೇ ಸಾಲಿನ ಆಯವ್ಯಯ ಘೋಷಣೆಯಂತೆ, ಸರ್ಕಾರದ ಆದೇಶ ಸಂಖ್ಯೆ: ಕಸಿಇ-ವಿಪಿಪಿ/17/2023, ದಿ:07.09.2023ರಲ್ಲಿ ಚಾಲ್ತಿಯಲ್ಲಿರುವ ನಿಯಮಗಳನುಸಾರ ಅರ್ಹರಾದ ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರ ಮಾಸಾಶನವನ್ನು ರೂ.10,000/- ಗಳಿಂದ ರೂ.12,000/-ಗಳಿಗೆ ಹಾಗೂ ಅಂತಹ ಪತ್ರಕರ್ತರು ಮೃತರಾದಲ್ಲಿ ಅವರ ಅವಲಂಬಿತರಿಗೆ ಕುಟುಂಬ ಮಾಸಾಶನವನ್ನು ರೂ.3,000/-ಗಳಿಂದ ರೂ.6,000/-ಗಳಿಗೆ ಹೆಚ್ಚಿಸಲಾಗಿದೆ. ಸದರಿ ಆದೇಶವು 2023ನೇ ಸೆಪ್ಟೆಂಬರ್ ಮಾಹೆಯಿಂದಲೇ ಜಾರಿಯಲ್ಲಿದೆ. |

ಕಸಿಇ/181/ಪಿಐಪಿ/2024

**(ಸಿದ್ದರಾಮಯ್ಯ)**
**ಮುಖ್ಯಮಂತ್ರಿ**